ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ :- ಇಡೀ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಇಲ್ಲದೆ ತೊಂದರೆ.

*ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ನಿನ್ನೆ ರಾತ್ರಿ ಇಡೀ ಕರ್ನಾಟಕ ಸಂಪೂರ್ಣ ಕಗ್ಗತ್ತಲೆಯಲ್ಲಿತ್ತು. ಒಂದು ಕರಾಳ ಛಾಯೆ ರಾಜ್ಯವನ್ನು ಆವರಿಸಿಕೊಂಡಿತ್ತು. ಬಹುಶಃ ಕರ್ನಾಟಕದ ಇತಿಹಾಸದಲ್ಲಿಯೇ ಈ ರೀತಿ ವಿದ್ಯುತ್ ಕೆಟ್ಟು ಕಗ್ಗತ್ತಲೆಯಲ್ಲಿದ್ದುದು ನೋಡಿಲ್ಲ. ಇದಕ್ಕೆ ಕಾರಣವೇನು? ಯಾವ ಉದ್ದೇಶಕ್ಕಾಗಿ ಹೀಗಾಯಿತು? ಇದನ್ನು ಸರಿಪಡಿಸುವುದಕ್ಕೆ ಏನು ವ್ಯವಸ್ಥೆ ಮಾಡಲಾಗಿದೆ? ಇದರ ಬಗ್ಗೆ ಪರಿಣಾಮಕಾರಿಯಾದಂಥ ಒಂದು ಸಮಜಾಯಿಷಿಯನ್ನು ನಾವು ಸರ್ಕಾರದಿಂದ ನಿರೀಕ್ಷಿಸುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ಈಗಾಗಲೇ ತನ್ನ ಹೇಳಿಕೆ ಕೊಡಬೇಕಾಗಿತ್ತು. ಸದನಕ್ಕೆ ಮಾನ್ಯ ವಿದ್ಯುಚ್ಛಕ್ತಿ ಉಪ ಮುಖ್ಯಮಂತ್ರಿಗಳು ದಯಮಾಡಿಸಿದ್ದಾರೆ. ಬಂದ ತಕ್ಷಣ ಅವರಿಗೆ ಶಾಕ್ ಹೊಡೆದಿದೆ, ಅವರಿಗೆ ಪ್ರಪ್ರಥಮವಾಗಿ ಇದರ ಒಂದು ಬಿಸಿ ತಟ್ಟಿದೆಯೆಂದು ನನಗನ್ನಿಸುತ್ತದೆ. ನಿನ್ನೆ ಇಡೀ ರಾತ್ರಿ ಎಲ್ಲಿ ನೋಡಿದರೂ ಕೂಡ ಕತ್ತಲೆಯಾಗಿತ್ತು. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಈ ರೀತಿಯ ಪರಿಸ್ಥಿತಿ ಹಿಂದೆಂದೂ ಉದ್ಭವವಾಗಿರಲಿಲ್ಲ. ಇದಕ್ಕೆ ಕಾರಣವೇನು? ವ್ರತನಿತ್ಯ ನಿಯಮಿತವಾಗಿ ನಡೆಯುತ್ತಿದ್ದಂಥ ಈ ಒಂದು ವ್ಯವಸ್ಥೆ ಇದ್ದಕ್ಕಿದ್ದಂತೆ ನಿಂತುಹೋಗಿದ್ದು ನೋಡಿದರೆ ವಿದ್ಯುಚ್ಛಕ್ತಿ ಮಂಡಳಿ ಸಂಪೂರ್ಣವಾಗಿ ಸತ್ತುಹೋಗಿದೆಯೆಂದು ಅನ್ನಿಸುತ್ತದೆ. ಕರ್ನಾಟಕದ ವಿದ್ಯುಚ್ಛಕ್ತಿ ಮಂಡಲಿ ಇಲ್ಲವೇನೋ ಎನ್ನತಕ್ಕ ಯಾವುದೋ ಒಂದು ಯುಗದ ಛಾಯೆ ನಿನ್ನೆ ರಾತ್ರಿ ಕಾಣುತ್ತಿತ್ತು. ಆದುದರಿಂದ, ಇದರ ಬಗ್ಗೆ ಸರ್ಕಾರ ಪರಿಣಾಮಕಾರಿಯಾದಂಥ ಯಾವ ಕ್ರಮ ತೆಗೆದುಕೊಂಡಿದೆ? ಏನು ವ್ಯವಸ್ಥೆ ಮಾಡಿದೆ? ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದ ಸಮಯದಲ್ಲಿ ಕರ್ನಾಟಕ ರಾಜ್ಯದ ಕೋಟ್ಯಾಂತರ ರೈತರಿಗೆ ತುಂಬಾ ನಷ್ಟವಾಗಿದೆ, ಬೆಳೆಗಳಿಗೆ ಹಾನಿಯಾಗಿದೆ, ಕಾರ್ಖಾನೆಗಳಲ್ಲಿ ಪ್ರಗತಿದಾಯಕವಾದಂಥ ಕೆಲಸವಾಗಿಲ್ಲ, ಇನ್ನು ಅನೇಕ ಇಂತಹ ವಿಚಾರಗಳನ್ನು ನೋಡಿದಾಗ ಬಹುಶಃ ನಿನ್ನೆ ಅಪಾರವಾದಂಥ ನಷ್ಟವಾಗಿದೆ ಎಲ್ಲಕ್ಕಿಂತ ಹೆಚ್ಚಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ತೀರಾ ಬೇಜವಾಬ್ದಾರಿತನದಿಂದ ವರ್ತಿಸಿದೆಯೆಂದು ನಾವು ಒತ್ತಾಯ ಮಾಡಿ ಹೇಳಬೇಕಾಗಿದೆ.

ಈ ರೀತಿ ಅನೇಕ ಸಲ ಆಗುತ್ತಾ ಇರುತ್ತದೆ. ವಿದ್ಯುಚ್ಛಕ್ತಿ ಮಂಡಲಿ ಬಗ್ಗೆ ನಿರಂತರವಾದಂಥ ಆಪಾದನೆಗಳು ಇವೆ ಮತ್ತು ಅದರ ಕಾರ್ಯಭಾರದ ಬಗ್ಗೆ ತೀವ್ರವಾದಂತಹ ಆಪಾದನೆಗಳು ಇದೆ. ಆದರೂ ಸಹ ನಿನ್ನೆ ಆಗಿರತಕ್ಕಂತಹ ವ್ಯವಸ್ಥೆ ನೋಡಿದರೆ ವಿದ್ಯುಚ್ಛಕ್ತಿಗೆ ಕರ್ನಾಟಕದಲ್ಲಿ ಏನು ಇಂತಹ ಶೋಚನೀಯ ಪರಿಸ್ಥಿತಿ ಬಂತಲ್ಲ ಎಂದು ಅನ್ನಿಸುತ್ತದೆ. ದಯಮಾಡಿ ಮಾನ್ಯಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು ಎಂದು ತಮ್ಮ ಮೂಲಕ ಕೇಳುತ್ತೇವೆ. ಪರಿಸ್ಥಿತಿ ಏನಾಗಿತ್ತು ಎನ್ನುವುದನ್ನು ತಿಳಿಸಬೇಕಾಗಿದೆ. ನಿನ್ನೆ ದಿವಸ ಎಲ್ಲೆಲ್ಲೂ ಅಶಾಂತ ವಾತಾವರಣ ಉಂಟಾಗಿತ್ತು, ಯಾವ ರಸ್ತೆ, ಯಾವ ಬೀದಿ ನೋಡಿದರೂ, ಇಡೀ ಕರ್ನಾಟಕದ ಉದ್ದಗಲಕ್ಕೂ ಈ ಪರಿಸ್ಥಿತಿಯುಂಟಾಗಿತ್ತು. ಇದಕ್ಕೆ ಕಾರಣ ಏನು? ವಿದ್ಯುಚ್ಛಕ್ತಿ ಮಂಡಲಿ ಜವಾಬ್ದಾರಿ ಏಕೆ ವಹಿಸಲಿಲ್ಲ. ಈ ವಿದ್ಯುಚ್ಛಕ್ತಿ ಮಂಡಲಿಗೆ ಜವಾಬ್ದಾರಿ ಇದೆಯೋ ಇಲ್ಲವೋ ಎನ್ನತಕ್ಕಂತಹ ಮಾತನ್ನು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳುತ್ತಾ ಇದ್ದೇನೆ.

*ಶ್ರೀ ಆರ್.ಎ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಇದು ನಿನ್ನೆ ಒಂದೇ ದಿನ ಆದಂತಹ ಸಮಸ್ಯೆ ಅಲ್ಲ. ಇವತ್ತು ಗವರ್ನರ್ ಅಡ್ರೆಸ್ ಮೇಲೆ ಮಾತನಾಡಬೇಕು ಏನಿದು ನಾನು ನಿನ್ನೆ ಓದಬೇಕು ಎಂದು ಪ್ರಯತ್ನ ಮಾಡುತ್ತಿರಬೇಕಾದರೆ ಕರೆಂಟ್ ಒಂಭತ್ತೂವರೆಗೆ ಹೋಯಿತು. I waited upto 11-30.

ಕರೆಂಟ್ ಬಂದಿಲ್ಲ. ಮುಂಜಾನೆ ಆದು ನಾಲ್ಕೂವರೆಗೊ ಅಥವಾ ಐದು ಗಂಟೆಗೊ ಬಂತು, ಪುನಃ ಐದೂವರೆಗೆ ಹೋಯಿತು. ಈ ರೀತಿ ಏಕೆ ಆಗುತ್ತಾ ಇದೆ. ಇದಕ್ಕೆ ಜವಾಬ್ದಾರರು ಯಾರು? ತಾವು ಒಂದು ಕಡೆ ಹೇಳುತ್ತಿದ್ದೀರಿ, ನಾವು ಪವರ್ ಸೆಕ್ಟಾರ್ ಪ್ರಕಾರ ಈ ಪೊಗ್ರೆಸ್ ಮಾಡಿದ್ದೇವೆ, ಇಷ್ಟು ಮಿಲಿಯನ್ ಯೂನಿಟ್ ಜನರೇಟ್ ಮಾಡುತ್ತಿದ್ದೇವೆ, ಇಂಪ್ರೂವ್ ಮಾಡುತ್ತೇವೆ ಎಂದು ಹೇಳುತ್ತೀರಿ. ಇವತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆ ಬರುತ್ತಾ ಇದೆ. ವಿದ್ಯಾರ್ಥಿಗಳು ಏನು ಮಾಡಬೇಕು? ರೈತರು ಏನು ಮಾಡಬೇಕು? ಇವತ್ತೆಲ್ಲಾ ಬೆಳೆಗಳು ಹಾಳಾಗುತ್ತಾ ಇವೆ, ಇದಕ್ಕೆ ಜವಾಬ್ದಾರರು ಯಾರು? ಇವತ್ತು ಒಂದು ಕಡೆ ಕೆಇಬಿ ಮನಸ್ಸು ಬಂದಹಾಗೆ ದರ ಹೆಚ್ಚು ಮಾಡುತ್ತಾ ಇದೆ. ಮತ್ತೊಂದು ಕಡೆ ಅಭಿವೃದ್ಧಿ ಕೆಲಸ ಇಲ್ಲ. ನಾವು ಪ್ರತಿ ವರ್ಷವೂ ೫೦-೬೦ ಸಾವಿರ ಪಂಪ್‌ಸೆಟ್ಸ್ ಎನರ್ಜೈಸ್ ಮಾಡುತ್ತೇವೆ ಎಂದು ಇಷ್ಟೇ ಹೇಳುತ್ತಾರೆಯೇ ಏನಃ ಕೆಇಬಿಯಲ್ಲಿ ಮೂಲಭೂತವಾಗಿ ಏನು ತೊಂದರೆ ಇದೆ, ಕಷ್ಟಗಳು ಏನು ಇವೆ ಅದರ ಬಗ್ಗೆ ಸರ್ಕಾರ ಏನೂ ವಿಚಾರ ಮಾಡಿಲ್ಲ. ಹಾಗಾಗಿ ಇವತ್ತು ತಾವು ಕೆಇಬಿ ಬಗ್ಗೆ ಕಾಂಪ್ರೆಹೆನ್ಸೀವ್ ಸ್ಟಡಿ ಮಾಡಬೇಕಾಗುತ್ತದೆ. ಈ ರೀತಿ ಕರೆಂಟ್ ಫೆಲ್ಯೂರ್ ಜಾಸ್ತಿ ಆಗುತ್ತಾ ಇದೆ. ವೋಲ್ಟೇಜ್ ಕಡಿಮೆಯಾಗಿ ಪಂಪ್‌ಸೆಟ್ ಸುಡುತ್ತಾ ಇವೆ. ರೈತರಿಗೆ ಸಾಕಷ್ಟು ಅನ್ಯಾಯವಾಗುತ್ತಾ ಇದೆ. ಬೆಳೆಗಳು ಹಾಳಾಗುತ್ತಾ ಇವೆ. ಇದಕ್ಕೆ ಜವಾಬ್ದಾರರು ಯಾರು? ಇವತ್ತು ರೈತನ ಪಂಪ್‌ಸೆಟ್ ಸುಟ್ಟರೆ ಕೆಇಬಿ ಏನು ಕಾಂಪನ್‌ಸೇಟ್ ಮಾಡುತ್ತದೆಯೇ? ಇಲ್ಲ. ನೀವು ಪವರ್ ಕೊಟ್ಟಿಲ್ಲ ಅಂದರೂ ಹಣ ತೆಗೆದುಕೊಳ್ಳುತ್ತೀರಿ. ಪವರ್ ಕಟ್ ಇದ್ದರೂ ಹಣ ತೆಗೆದುಕೊಳ್ಳುತ್ತೀರಿ. ಆದರೆ ರೈತನ ಪಂಪ್‌ಸೆಟ್ ಸುಟ್ಟಾಗ ಕೆಇಬಿ ನೆರವು ಬರುವುದಿಲ್ಲ. ಇವತ್ತು ಎಷ್ಟೋ ರೈತರು ಕಷ್ಟದಲ್ಲಿ ಇದ್ದಾರೆ, ಸಾಮಾನ್ಯ ಜನ ಕಷ್ಟದಲ್ಲಿದ್ದಾರೆ ವಿದ್ಯಾರ್ಥಿಗಳು ಕಷ್ಟದಲ್ಲಿದ್ದಾರೆ. ಹಾಗಾಗಿ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ, ಅವರಿಗೆ ಒಳ್ಳೆಯ ಅನುಭವ ಇದೆ ಎಂದು ನನಗೆ ಗೊತ್ತು. ಆ ಅನುಭವದ ಫಲ ಇವತ್ತು ಕೆಇಬಿಗೆ ಸಿಗಬೇಕಾಗಿದೆ, ಈ ನಾಡಿಗೆ ಸಿಗಬೇಕಾಗಿದೆ. ಅಲ್ಲಿ ಒಂದು ರೆವಲ್ಯೂಷನ್ ಛೇಂಜ್ ಆಗಬೇಕಾಗಿದೆ. ಹಾಗಾಗಿ ನಿನ್ನೆ ದಿವಸ ಲೈಟ್ ಹೋಯಿತು, ಅದಕ್ಕೆ ಇವತ್ತು ಪರಿಹಾರ ಕಂಡುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಮುಂಜಾನೆ ಲೈಟ್ ಬಂದಿದೆ. ಆದೂ ಓವರ್ ಆಲ್ ಕಾಂಪ್ರೆಹೆನ್ಸೀವ್ ಆಗಿ ತಾವು ಒಂದು ಸದನದ ಸಮಿತಿ ಮಾಡಿ. ಇದರ ಬಗ್ಗೆ ಇನ್ ಡಿಟೈಲ್ ಹೋಗಲಿ, ಅದರಲ್ಲಿ ಕೆಲವು ಎಕ್ಸ್‌ಪರ್ಟ್ಸ್ ಇರಲಿ. ಆದರ ಬಗ್ಗೆ ರಿಪೋರ್ಟ್ ತೆಗೆದುಕೊಳ್ಳಲಿ. ಇಲ್ಲ ಅಂದರೆ ಈ ಪ್ರಶ್ನೆ ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಒಂದು ಕಡೆ ಸ್ಕೀಮ್ಸ್ ಇದೆ, ೫೦-೬೦ ಸಾವಿರ ಪಂಪ್‌ಸೆಟ್ಸ್ ಎನರ್‌ಜೈಸ್ ಮಾಡುತ್ತೇವೆ ಎಂದು ಹೇಳುತ್ತೀರಿ, ಮತ್ತೊಂದು ಕಡೆ ಇನ್‌ಫ್ರಾಸ್ಟ್ರಕ್ಚರ್ ಇಲ್ಲ. ಮೊನ್ನೆ ನಾನು ಆದನ್ನು ತಮ್ಮ ಗಮನಕ್ಕೆ ತಂದೆ. ಇನ್‌ಫ್ರಾಸ್ಟ್ರಕ್ಚರ್ ಇಲ್ಲ, ಲೈನ್ ಮೆನ್ಸ್ ಇಲ್ಲ, ಮೆಯಿನ್‌ಟೇನೆನ್ಸ್ ಇಲ್ಲ. ಹಾಗಾಗಿ ಫ್ರೀಕ್ವೆಂಟ್ ಫೆಲ್ಯೂರ್ಸ್ ಏನು ಆಗುತ್ತಾ ಇದೆ, ಅದಕ್ಕೆ ಮೂಲಭೂತವಾಗಿ ಏನು ಸಮಸ್ಯೆ ಇದೆ ಎಂದು ತಾವು ನೋಡಬೇಕಾಗುತ್ತದೆ. ಆ ದೃಷ್ಟಿಯಿಂದ ತಾವು ಕ್ರಮ ತೆಗೆದುಕೊಳ್ಳಬೇಕು. ಸಾಧ್ಯವಾದರೆ ಒಂದು ಸದನದ ಸಮಿತಿಯನ್ನು ಸರ್ಕಾರ ಮಾಡಿ, ರೈತರಿಗೆ ಬಡ ಜನರಿಗೆ, ಸಾಮಾನ್ಯ ಜನರಿಗೆ, ಮತ್ತು ವಿದ್ಯಾರ್ಥಿಗಳ ನೆರವಿಗೆ ಸರ್ಕಾರ ಬರಬೇಕು. ನಿನ್ನೆ ಏನು ಅನಾಹುತವಾಯಿತು ಅದರಿಂದ ಕೋಟಿಗಟ್ಟಲೆ ಲಾಸ್ ಆಗಿದೆ. ಇಂಡಸ್ಟ್ರಿಯಲ್ ಪ್ರೊಡಕ್ಷನ್‌ಗೆ ಎಷ್ಟು ಲಾಸ್ ಆಗಿದೆ? ಈ ಮಧ್ಯೆ ಪವರ್ ಕಟ್ ಇದೆ. ಈಗಾಗಲೇ ಪವರ್ ಕಟ್‌ನಿಂದ ಪವರ್ ಸೆಕ್ಟರ್. ಮೇಲೆ ಪರಿಣಾಮವಾಗಿದೆ. ಇಂಡಸ್ಟ್ರೀಸ್ ಮೇಲೆ ಪರಿಣಾಮವಾಗಿದೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಮೇಲೆ ಪರಿಣಾಮವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಇದೇ ರೀತಿ ನಡೆಯುತ್ತಾ ಹೋದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ಮಟ್ಟಕ್ಕೆ ಮುಟ್ಟಬಹುದು. ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೆಂದು ತಮಗೆ ಗೊತ್ತು. ಸಾಲರಿ ಕೊಡುವುದಕ್ಕೆ ಇವತ್ತು ಹಣ ಇಲ್ಲ. ಇದೇ ಪ್ರಕಾರ ನಡೆದರೆ ಹೇಗೆ? ರಾಜ್ಯಸರ್ಕಾರದ

ಎಕಾನಮಿ ಇಂಪ್ರೂವ್ ಆಗಬೇಕಾದರೆ Power is also an important sector. ನಿಮ್ಮ ಕಡೆಯಿಂದ ಸಾಕಷ್ಟು ರೆವಿನ್ಯೂ ಹೋಗಬೇಕಾಗುತ್ತದೆ. ಹಾಗಾಗಿ ಇದು ಈ ರೀತಿಯಾದರೆ ಇವತ್ತು ಇಂಡಸ್ಟ್ರೀಯಲ್ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ಎಫೆಕ್ಟ್ ಆದರೆ ನಾಡಿನ ಪ್ರಗತಿ ಹೇಗೆ ಆಗುಬಹುದು. ಹಾಗಾಗಿ ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಆದುದರಿಂದ ತಾವು ಇದಕ್ಕೆ ಪ್ರಾಧಾನ್ಯತೆ ಮೇಲೆ ಗಮನ ಹರಿಸಿ, ಒಂದು ಪರಿಹಾರ ಕಂಡುಹಿಡಿಯಬೇಕು. ಮತ್ತು ಇದು ಏಕೆ ಆಯಿತು ಎನ್ನುವುದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, ಇಡೀ ಸಮಾಜ ಎದ್ದಿರಬೇಕಾದರೆ ಕೆ.ಇ.ಬಿ. ಮಲಗಿರುತ್ತದೆ. ಇವರ ಕಾರ್ಯ ವೈಖರಿಯನ್ನು ನಾವು ಪ್ರತಿದಿನವೂ ನೋಡುತ್ತಿದ್ದೇವೆ. ರೈತ ತನ್ನ ಜಮೀನಿಗೆ ನೀರು ಬೇಕು ಎಂದಾಗ ಆ ಸಂದರ್ಭದಲ್ಲಿ, ಹಗಲುಹೊತ್ತಿನಲ್ಲಿ ಇವರು ಕರೆಂಟನ್ನು ಒದಗಿಸುವುದಿಲ್ಲ. ರಾತ್ರಿ ಹೊತ್ತಿನಲ್ಲಿ ಯಾವುದೋ ಒಂದು ಟೈಮಿನಲ್ಲಿ ಕರೆಂಟ್ ಕೊಡುತ್ತಾರೆ. ಎಲ್ಲರೂ ಮಲಗಿರಬೇಕಾದರೆ ಇವರು ಎದ್ದಿರುತ್ತಾರೆ. ನಿನ್ನೆ ಇದರ ರಾಕ್ಷಸೀ ಸ್ವರೂಪವನ್ನು ಕಂಡಿದ್ದೇವೆ. ಇದ್ದಕ್ಕಿದ್ದ ಹಾಗೆ ರಾತ್ರಿ ಕರೆಂಟ್ ಹೋಯಿತು ಬೆಳಗಿನವರೆಗೆ ಬರಲಿಲ್ಲ. ಕೆ.ಇ.ಬಿಯವರು ಏನು ಮಾಡುತ್ತಿದ್ದಾರೊ ಗೊತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಹಗಲು ಕೂಡ ಕರೆಂಟ್ ಇರುವುದಿಲ್ಲ. ಏಕೆ ಹೀಗಾಯಿತು ಎಂಬುದು ರಾಜ್ಯದ ಜನತೆಗೆ ಗೊತ್ತಾಗಲಿಲ್ಲ, ಮಂತ್ರಿಮಂಡಲಕ್ಕೂ ಗೊತ್ತಿಲ್ಲ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತುಂಬಾ ಚಾಲೂಕ ಆಗಿದ್ದಾರೆ, ಅವರು ಬಂದಕೂಡಲೆ ಈ ಇಲಾಖೆ ರಿಪೇರಿ ಆಗಬಹುದೆಂದು ತಿಳಿದುಕೊಂಡಿದ್ದೆ. ಆದರೆ ಅದು ಅದೇ ಸ್ವರೂಪದಲ್ಲಿ ಮುಂದುವರೆಯುತ್ತಿದೆ ಎಂದು ಕಾಣುತ್ತದೆ. ಪರೀಕ್ಷೆ ನಡೆಯುತ್ತಿರುವಂತಹ ಸಮಯದಲ್ಲಿ, ವಿದ್ಯಾರ್ಥಿಗಳು ಓದುತ್ತಿರತಕ್ಕಂತಹ ಸಂದರ್ಭದಲ್ಲಿ ನಿನ್ನೆ ಇಡೀ ರಾತ್ರಿ ಕರೆಂಟ್ ಇಲ್ಲ. ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳು ಫೇಲಾದರೂ ಪರವಾಗಿಲ್ಲ ಎಂಬ ತೀರ್ಮಾನವನ್ನು ಇವರು ಮಾಡಿದಂತೆ ಕಾಣುತ್ತದೆ. ಮತ್ತೊಮ್ಮೆ ಈರೀತಿ ಆಗಬಾರದು ಈ ವಿಷಯದ ಬಗ್ಗೆ ಸರ್ಕಾರ ಸಂಪೂರ್ಣ ಗಮನಹರಿಸಿ ಮುನ್ನೆಚ್ಚರಿಕೆ ವಹಿಸಿ ಈ ಇಲಾಖೆ ಸರಿಯಾಗಿ ನಡೆದುಕೊಂಡು ಹೋಗುವಂತೆ ಮಾಡಬೇಕು. ಇಲ್ಲದಿದ್ದರೆ ರಾಜ್ಯದ ಜನತೆ, ವಿದ್ಯಾರ್ಥಿಗಳು, ಯುವಕರು ಈ ಸರ್ಕಾರದ ವಿರುದ್ಧ ತಿರುಗಿ ಬೀಳಬೇಕಾಗುತ್ತದೆ. ಆದ್ದರಿಂದ ಸರ್ಕಾರ ಆಸಕ್ತಿ ವಹಿಸಿ ಈ ಕೆ.ಇ.ಬಿ. ಇಲಾಖೆಯನ್ನು ಚುರುಕುಗೊಳಿಸಬೇಕೆಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಮೋಟಮ್ಮನವರು ಪೀಠವನ್ನು ಅಲಂಕರಿಸಿದರು)

*ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ):- ಮಾನ್ಯ ಅಧ್ಯಕ್ಷರೆ, ಈಗ ಹೊಸದಾಗಿ ಈ ಇಂಧನ ಇಲಾಖೆಯ ಜವಾಬ್ದಾರಿಯನ್ನು ನಮ್ಮ ಉಪಮುಖ್ಯಮಂತ್ರಿಗಳು ವಹಿಸಿಕೊಂಡಿದ್ದಾರೆ. ಈ ಕೆ.ಇ.ಬಿ. ಮತ್ತು ಇಂಧನ ಇಲಾಖೆ ಬಗ್ಗೆ ದೀರ್ಘವಾಗಿ ನಾವು ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ, ನಮ್ಮ ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಕ್ಕೆ ನಾನು ಮತ್ತೊಂದು ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ನಮ್ಮ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೆ. ನಿನ್ನೆಯ ದಿನ ಇಡೀ ರಾಜ್ಯದಲ್ಲಿ ಈ ರೀತಿ ವಿದ್ಯುಚ್ಛಕ್ತಿ ಸಂಪೂರ್ಣವಾಗಿ ನಿಂತುಹೋಗಿದ್ದರಿಂದ ಜನರಿಗೆ, ರೈತರಿಗೆ ಮತ್ತು ಕೈಗಾರಿಕೆಗಳಿಗೆ ತೊಂದರೆಯಾಗಿದೆ. ಇದು ಆಕಸ್ಮಿಕವಾಗಿ ಆಗಿರತಕ್ಕ ಘಟನೆ ಆಗಿರಬಹುದು. ನ್ಯಾಶನಲ್ ಗ್ರಿಡ್‌ನಿಂದ, ಇಂಟರ್‌ಸ್ಟೇಟ್ ಗ್ರಿಡ್‌ನಿಂದ ಪವರ್ ಸಪ್ಲೈ ಬರುವುದರಲ್ಲಿ ಫೇಲ್ಯೂರ್ ಆಗಿರಬಹುದು. ನಮ್ಮಲ್ಲಿ ಹೈಡ್ರಾಲಿಕ್ ಜನರೇಶನ್ ಸ್ಟೇಶನ್ಸ್ ಇವೆ. ಆ ಸ್ಟೇಶನ್‌ಗಳು ಏತಕ್ಕೆ ಕೆಲಸ ಮಾಡಲಿಲ್ಲ ಎಂಬುದು ನನ್ನ ಮೊದಲನೆಯ ಪ್ರಶ್ನೆ. ಇನ್ನು ಎರಡನೆಯದಾಗಿ, ಈ ರೀತಿಯಾಗಿರುವುದರಿಂದ ಲಕ್ಷಾಂತರ ಜನ ಆದರಲ್ಲೂ ವಿಶೇಷವಾಗಿ ಸಣ್ಣರೈತರುಗಳಿಗೆ ಬಹಳ ತೊಂದರೆ ಉಂಟಾಗಿದೆ. ಕೈಗಾರಿಕೆಗಳಿಗೆ ಪರವಾಗಿಲ್ಲ, ಆದರೆ ಸಣ್ಣ ರೈತರು ೫ ಹೆಚ್‌ಪಿ, ೧೦ ಹೆಚ್‌ಪಿ ಪಂಪ್‌ಸೆಟ್ಟುಗಳನ್ನು ಹಾಕಿಕೊಂಡು

ವ್ಯವಸಾಯ ಮಾಡತಕ್ಕ ಜನ ಯಾರಿದ್ದಾರೆ ಅವರಿಗೆ ಇದರಿಂದ ಬಹಳ ತೊಂದರೆ ಉಂಟಾಗಿದೆ. ಈ ರೀತಿ ಆದರೆ ಅವರ ಮೋಟಾರುಗಳು ಸುಟ್ಟುಹೋಗುತ್ತವೆ. ವಿದ್ಯುಚ್ಛಕ್ತಿ ಇಲಾಖೆ ಇದರ ಬಗ್ಗೆ ಕಾಂಪೆನ್ಸೇಶನ್ ಕೊಡತಕ್ಕ ಸ್ಥಿತಿಯಲ್ಲಿ ಇಲ್ಲ. ರೈತರು ಕೋರ್ಟಿಗೆ ಹೋಗಬೇಕಾಗುತ್ತದೆ. ಆದ್ದರಿಂದ ಈ ರೀತಿ ಮುಂದೆ ಆಗದಿರುವ ಹಾಗೆ ನೋಡಿಕೊಳ್ಳಲು ಸರ್ಕಾರ ಏನು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇದರ ಜೊತೆಗೆ ವಿರೋಧಪಕ್ಷದ ನಾಯಕರು ಮತ್ತು ಮುಖಂಡರುಗಳನ್ನು ಕರೆದು ಮಾತುಕತೆ ಮಾಡುವುದಾಗಿ ಒಂದಲ್ಲ ೧೦ ಸಲ ಈ ಸದನದಲ್ಲಿ ಭರವಸೆ ಕೊಟ್ಟಿದ್ದಾರೆ. ಆದರೆ ಅದೂ ಕೂಡ ಇದುವರೆಗೆ ಆಗಿಲ್ಲ. ಆದ್ದರಿಂದ ಮಾನ್ಯ ಉಪ ಮುಖ್ಯಮಂತ್ರಿಯವರು ಇದರ ಬಗ್ಗೆ ಗಮನಹರಿಸಿ ತಕ್ಷಣ ಸಭೆಯನ್ನು ಕರೆಯುವ ತೀರ್ಮಾನ ಮಾಡಬೇಕು ಎಂದು ಹೇಳುತ್ತೇನೆ.

*ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನಿನ್ನೆ ರಾತ್ರಿ ಕರೆಂಟ್ ಹೋಯಿತು. ಆದರಿಂದ ಬಹಳ ತೊಂದರೆಯಾಯಿತು. ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಇದು ಆಕಸ್ಮಿಕವಾಗಿ ಆಗಿರಬಹುದು. ಆದರೆ ನಮ್ಮೂರಿನಲ್ಲಿ ಯಾವಾಗಲೂ ಕರೆಂಟ್ ಇರುವುದಿಲ್ಲ. ಅಲ್ಲಿ ಸಾಯಲಿಕ್ಕೆ ಹೋದರೂ ಕರೆಂಟ್ ಸಿಕ್ಕಲಿಲ್ಲ. ಪಂಪ್‌ಸೆಟ್ಟುಗಳಿಗೆ ಕರೆಂಟ್ ಇಲ್ಲ. ಇದರ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಗಲಾಟೆಯಾಯಿತು. ಅಲ್ಲಿ ಎಷ್ಟು ತೊಂದರೆ ಇದೆ ಎಂಬುದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಈಗ ಮಾನ್ಯ ಕೃಷ್ಣಾರವರು ಈ ಖಾತೆಯನ್ನು ಹೊಂದಿದ್ದಾರೆ. ಈ ಇಲಾಖೆಯ ಅವ್ಯವಸ್ಥೆಯ ಬಗ್ಗೆ ನಾವು ಅವರನ್ನು ನಿಂದನೆ ಮಾಡಬೇಕಾಗಿದೆ. ಇದನ್ನು ಸರಿಪಡಿಸಲು ಯಾರಿಗೂ ಸಾಧ್ಯವಿಲ್ಲ. ಫೋನ್ ಮಾಡಿದರೆ ಉತ್ತರ ಕೊಡುವುದಿಲ್ಲ. ಕೇಳಿದರೆ ಲೈನ್ ಮೇಲ್ಗಡೆ ಹೊರಟುಹೋಗಿದೆ ಎಂದು ಹೇಳುತ್ತಾರೆ. ಸರಿಯಾದ ಉತ್ತರ ಕೊಡುವುದಿಲ್ಲ. ಮೇಲಿನಿಂದ ಅಥವಾ ಕೆಳಗಿನಿಂದ ಹೋಗುತ್ತದೆ ಎಂದು ಹೇಳುತ್ತಾರೆ. ಅದು ನಮಗೆ ಗೊತ್ತಾಗುವುದಿಲ್ಲ. ಇದನ್ನೆಲ್ಲಾ ಯಾವಾಗ ಸುಧಾರಿಸುತ್ತೀರಿ. ಇದರ ಬಗ್ಗೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

*ಶ್ರೀ ಶಿವಾನಂದ ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೆ ಇದು ಬರೇ ಬೆಂಗಳೂರ್ ಶಹರಿನ ಪ್ರಸಂಗ ಅಷ್ಟೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಪ್ರತಿ ದಿವಸ ಕರೆಂಟ್ ಹೋಗುವುದನ್ನು ನಾವು ಕೇಳುತ್ತಿದ್ದೇವೆ. ಪ್ರತಿ ದಿವಸ ಐಪಿ ಸೆಟ್‌ಗಳು ಸುಟ್ಟುಹೋಗುತ್ತಿವೆ. ಕುಡಿಯುವ ನೀರಿನ ಸಲುವಾಗಿ ಇರತಕ್ಕ ಮಿಷನ್‌ಗಳು ಪ್ರತಿದಿನ ಕೆಟ್ಟು ಹೋಗುತ್ತಿರುತ್ತವೆ. ಹೀಗಾಗಿ ರೈತರಿಗೆ ಪ್ರತಿ ದಿನ ತೊಂದರೆ ಉಂಟಾಗುತ್ತಿದೆ. ಇದರ ಜೊತೆಗೆ ಲೋ ವೋಲ್ಟೇಜ್ ಬರುತ್ತದೆ. ಒಮ್ಮಿಂದೊಮ್ಮೆ ಹೈ ವೋಲ್ಟೇಜ್ ಬರುತ್ತದೆ. ಹೀಗಾಗಿ ರೈತರಿಗೆ ಪ್ರತಿದಿವಸ ತುಂಬಾ ತ್ರಾಸಾವಾಗುತ್ತಿದೆ.

೧೧.೦೦ ಎ.ಎಂ.

ಅವರು ಒಂದು ಗಡುವು ಕೊಟ್ಟು ಪವರನ್ನು ೮ ತಾಸು ತೆಗೆಯುತ್ತೇವೆ ಎಂದರೆ, ತೆಗೆಯಲಿ. ಹತ್ತಾರು ತಾಸು ತೆಗೆಯುತ್ತೇವೆ ಎಂದರೆ ತೆಗಿಯಲಿ. ಆದರೆ ಒಮ್ಮೆ ಮುಂಜಾನೆ, ಒಮ್ಮೆ ಮಧ್ಯಾಹ್ನ, ಒಮ್ಮೆ ರಾತ್ರಿ ಹೊತ್ತು ತೆಗೆಯುತ್ತಾರೆ. ಹೀಗಾಗಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಅದೂ ಅಲ್ಲದೆ ಲೋ ವೋಲ್ಟೆಜ್, ಹೈ ವೋಲ್ಟೆಜ್ ಮಾಡುವುದರಿಂದ ಐ.ಪಿ. ಸೆಟ್‌ಗಳು ಮೇಲಿಂದ ಮೇಲೆ ಸುಟ್ಟು ಹೋಗುತ್ತವೆ. ಆದಕ್ಕೆ ಯಾರು ಜವಾಬ್ದಾರಿ? ಮತ್ತೆ ಬಿಲ್ಲು ಕೊಡುವಾಗ ನೋಡಿದರೆ ದೇವರಿಗೆ ಗೊತ್ತು. ನಾವು ಅಕಸ್ಮಾತ್ ಬಿಲ್ಲ್ ತುಂಬದಿದ್ದರೆ ಕುಡಿಯುವ ನೀರನ್ನು ಸಹ ಕಟ್ ಮಾಡುತ್ತಾರೆ. ಇವತ್ತಿನ ದಿವಸ ಮುಲಪ್ಪಳ

ಯೋಜನೆಯೊಳಗೆ ಗೌವರ್ನಮೆಂಟ್ ಐ.ಪಿ. ಸೆಟ್ಸ್ ಕೆ.ಇ.ಬಿ. ಯವರು ಕಟ್ ಮಾಡಿದರು ಖಾಸಗಿಯವರು ಅಲ್ಲ. ಅವರನ್ನು ಕೇಳಿದರೆ ನಮ್ಮದೂ ಒಂದು ಕಾರ್ಪೊರೇಷನ್ ಇದೆ, ನಿಮ್ಮದೂ ಒಂದು ಡಿಪಾರ್ಟ್‌ಮೆಂಟ್ ಇದೆ, ನೀವು ಎನ್.ಓ.ಸಿ ತೆಗೆದುಕೊಳ್ಳಿ, ಎನ್.ಓ.ಸಿಯನ್ನು ತೆಗೆದುಕೊಂಡು ಕ್ಯಾರಿ ಮಾಡಿಕೊಳ್ಳಿ ಎನ್ನುತ್ತಾರೆ. ಇದರಿಂದ ರೈತರು ಹಾಳಾಗುತ್ತಾರೆ. ಎಂದರೆ ಕೇಳುವುದಿಲ್ಲ. ಆದಕಾರಣ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಪ್ರಕಾರ ಸದನದ ಸಮಿತಿ ಮಾಡಿ ಅದರ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ರೈತರಿಗೆ, ಜನರಿಗೆ ಯಾವುದೇ ರೀತಿ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಉಪಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

* ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿ) :- ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆ ರಾತ್ರಿ ದಕ್ಷಿಣ ರಾಜ್ಯಗಳಲ್ಲಿ ವಿದ್ಯುತ್ ಅಪಘಾತ ಉಂಟಾಯಿತು ಸದರನ್ ರೀಜನಲ್ ಎಲೆಕ್ಟ್ರಿಸಿಟಿ ಬೋರ್ಡ್ ಏನು ಇದೆ ಅದು ದಕ್ಷಿಣ ರಾಜ್ಯಗಳ ವಿದ್ಯುತ್ ಕೊ-ಆರ್ಡಿನೇಷನ್ ಮಾಡುವಂತಹ ಬೋರ್ಡ್. ಮಾನ್ಯ ಸದಸ್ಯರಿಗೆ ತಿಳಿದಿರುವ ಪ್ರಕಾರ, ನಮಗೆ ೫೭ ಮಿಲಿಯನ್ ಯೂನಿಟ್ಸ್ ವಿದ್ಯುತ್ ಇವತ್ತಿನ ಅವಶ್ಯಕತೆ ಇದೆ. ಆದರೆ ನಮಗೆ ದಕ್ಕತಕ್ಕದ್ದು ೪೭ಮಿಲಿನ್ ಯೂನಿಟ್‌ಗಳು ಈಗಾಗಲೇ ೧೦ ಮಿಲಿಯನ್ ಯೂನಿಟ್ಸ್ ಡಿಫಿಸಿಟ್ ಆಗುತ್ತಿದೆ ಎನ್ನತಕ್ಕದ್ದು ತಮ್ಮ ಅರಿವಿಗೆ ಬಂದಿರತಕ್ಕಂಥ ವಿಚಾರ. ನಿನ್ನೆ ರಾತ್ರಿ ಸುಮಾರು ೯.೨೦ರ ವೇಳೆಗೆ ರಾಮಗೊಂಡಂ ಸೂಪರ್ ಥರ್ಮಲ್ ಪವರ್ ಸ್ಟೇಷನ್‌ನಲ್ಲಿ ಟ್ರಿಪ್ ಆಯಿತು. ಹಾಗೆಯೇ ನೈವೇಲಿ ಲಿಗ್‌ನೇಟ್ ಕಾರ್ಪೊರೇಷನ್ ಜನರೇಟಿಂಗ್ ಸ್ಟೇಷನ್‌ನಲ್ಲಿ ರಾತ್ರಿ ೯.೫೦ಕ್ಕೆ ಟ್ರಿಪ್ ಆಯಿತು. ಈ ಎರಡು ಜನರೇಟಿಂಗ್‌ನಿಂದ ನಮಗೆ ರಾತ್ರಿ ಹೊತ್ತು ಕರೆಂಟ್ ಪೂರೈಕೆಯಾಗುತ್ತದೆ. ಏಕೆಂದರೆ ೬೦೦ ಮೆಗವಾಟ್ಸ್ ಸೆಂಟ್ರಲ್ ಇನ್‌ಸ್ಪಲೇಷನ್‌ನಿಂದ ಕರ್ನಾಟಕ ರಾಜ್ಯಕ್ಕೆ ಪೂರೈಕೆಯಾಗುತ್ತದೆ. ಮತ್ತು ಇದು ಗ್ರಿಡ್ ಸಿಸ್ಟಮ್ ಸೇರಿರುವುದರಿಂದ ಅಲ್ಲಿ ಯಾವಾಗ ದೊಡ್ಡ ತೊಂದರೆಯುಂಟಾಗುತ್ತದೆ, ಜನರೇಟಿಂಗ್ ಕೆಪಾಸಿಟಿ ಪರೋಕ್ಷವಾಗಿ ನಿಂತು ಹೋಗುತ್ತದೆ, ಅದರ ಪರಿಣಾಮ ನಮ್ಮ ವಿದ್ಯುತ್ ಘಟಕಗಳ ಮೇಲೆ ಆಗುತ್ತದೆ. ಇಡೀ ದಕ್ಷಿಣರಾಜ್ಯಗಳಲ್ಲಿ ಅಂದರೆ ಮದ್ರಾಸ್ ಅಟಾಮಿಕ್ ಪವರ್ ಪ್ಲಾಂಟ್ ಕೂಡ ನಿನ್ನೆ ರಾತ್ರಿ ಟ್ರಿಪ್ ಆಯಿತು. ತಮಿಳುನಾಡಿನ ನಾಗಾರ್ಜುನ ಸಾಗರ, ರಾಮಗೊಂಡಂ ಸೂಪರ್ ಥರ್ಮಲ್ ಪವರ್ ಸ್ಟೇಷನ್, ನೈವೇಲಿ ಲಿಗ್ನೇಟ್ ಕಾರ್ಪೊರೇಷನ್ ಜನರೇಟಿಂಗ್ ಸ್ಟೇಷನ್ ಮತ್ತು ಮದ್ರಾಸ್ ಅಟಾಮಿಕ್ ಪವರ್ ಪ್ಲಾಂಟ್ ಕೂಡ ಟ್ರಿಪ್ ಆಯಿತು. ಇದರಿಂದ ವರಾಹ ಮೇಲೆ ಪರಿಣಾಮವಾಯಿತು, ಮತ್ತೊಂದರ ಮೇಲೆ ಪರಿಣಾಮ ಉಂಟಾಯಿತು. ಕರ್ನಾಟಕ ಮಾತ್ರ ಅಂಧಕಾರದಲ್ಲಿತ್ತು ಎಂದು ತಾವು ಭಾವಿಸಬಾರದು. ತಮಿಳುನಾಡು ಕೂಡ ಅಂಧಕಾರದಲ್ಲಿತ್ತು. ಆಂಧ್ರ ಪ್ರದೇಶ ಬಹು ಭಾಗ ಅಂಧಕಾರದಲ್ಲಿತ್ತು. ಕರ್ನಾಟಕವೂ ಕೂಡ ಪೂರ್ಣವಾಗಿ ಅಂಧಕಾರದಲ್ಲಿತ್ತು. ಹೀಗೆ ವಿಕಾಯಿತು ಎಂಬ ಬಗ್ಗೆ ಸಂಬಂಧಪಟ್ಟ ವಿದ್ಯುತ್ ಉತ್ಪಾದಕರ ಜೊತೆ ಈಗಾಗಲೇ ಮಾತನಾಡಿದ್ದೇವೆ. ಈಗ ನಾನು ಈ ಹೇಳಿಕೆಯನ್ನು ಸದನದಲ್ಲಿ ಮಂಡಿಸತಕ್ಕಂಥ ಕಾಲದಲ್ಲಿ ಮದ್ರಾಸ್ ಅಟಾಮಿಕ್ ಪವರ್ ಪ್ಲಾಂಟ್‌ನಿಂದ ಇನ್ನೂ ನಮಗೆ ಪವರ್ ಬರಲಿಕ್ಕೆ ಪ್ರಾರಂಭವಾಗಿಲ್ಲ. ಆದರೆ ಪಾರ್ಷಿಯಲ್ ರೆಸ್ಟೋರೇಷನ್ ಎಲ್ಲಾ ಕಡೆ ಆಗಿದೆ. ಇದರ ಬಗ್ಗೆ ನಾನು ಸೋಮವಾರ ಅಥವಾ ಮಂಗಳವಾರ ಮತ್ತೊಂದು ವರಿಪೂರ್ಣವಾದ ಹೇಳಿಕೆ ಕೊಡುತ್ತೇನೆ. ಸದನ ಯಾವತ್ತು ಅಪೇಕ್ಷೆ ಮಾಡುತ್ತದೆ ಆ ದಿವಸ ನಾನು ಪರಿಪೂರ್ಣ ಹೇಳಿಕೆ ನೀಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:- ನಿನ್ನೆ ಅಕ್ಸಿಡೆಂಟಲ್ ಆಗಿರಬಹುದು. ಮೂರೂ ಯೂನಿಟ್‌ಗಳು ಒಂದೇ ಬಾರಿಗೆ ಫೇಲ್ಯೂರ್ ಆಗತಕ್ಕದ್ದರಲ್ಲಿ ಕಾನ್‌ಸ್ಪಿರಸಿ ಇತ್ತೋ, ನನಗೆ ಗೊತ್ತಿಲ್ಲ. You have to find out. There was something. ಮದ್ರಾಸೂ ಡಾರ್ಕ್,

ಬೆಂಗಳೂರು ಡಾರ್ಕ್ ಅಂದರೆ something was behind. ಅದನ್ನು ನೋಡಿ. ಈ ರೀತಿ ಆಕ್ಸಿಡೆಂಟಲಿ ಆಯಿತು ಎಂದರೆ ತಾವು ಹೇಳಿಬಹುದು. But over all regular ಆಗಿ ವೋಲ್ಟೇಜ್ ಕಡಿಮೆಯಾಗುತ್ತಿದೆ. ಇದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ ತಾವು ಹೇಳಿಕೆ ಕೊಡಬೇಕು. ತಾವು ಏನು ಕ್ರಮತೆಗೆದುಕೊಂಡಿದ್ದೀರಿ ಎನ್ನುವುದು ಬಹಳ ಮುಖ್ಯವಾದುದು.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ಸಚಿವರು ಹೇಳಿದ್ದರಲ್ಲಿ ಒಂದು ರೀತಿಯ ಗಾಭರಿ ಹುಟ್ಟಿಸುವಂಥಾದ್ದಾಗಿದೆ. ಏಕೆಂದರೆ, ದಕ್ಷಿಣ ರಾಜ್ಯಗಳಲ್ಲಿ ಎಲ್ಲಾ ಕಡೆ ವಿದ್ಯುಚ್ಛಕ್ತಿ ಹೋಗಿದೆ ಎಂದರೆ ಇದರ ಹಿಂದೆ ಏನಾದರೂ ಭಾರಿ ದೊಡ್ಡ ಪಿತೂರಿ ಇದೆಯೇ ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿ. ಏಕೆಂದರೆ ಒದೇಸಾರಿ ಇಡೀ ದಕ್ಷಿಣ ರಾಜ್ಯಗಳಲ್ಲಿ ಕಗ್ಗತ್ತಲೆಯಾಗಬೇಕಾದರೆ ಇದರಲ್ಲಿ ಪಿತೂರಿ ಇದ್ದರೂ ಇರಬಹುದು ಎನ್ನುವ ಶಂಕೆ ಉದ್ಭವವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ನಿನ್ನೆ ರಾತ್ರಿಮಾತ್ರವಲ್ಲ, ಪ್ರತಿದಿನ ಒಂದಲ್ಲ ಒಂದು ಮೂಲೆಯಲ್ಲಿ ಜನಗಳು ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದಾರೆ. ಮಾನ್ಯ ಸಚಿವರು ಮೊದಲನೆಯ ಹೇಳಿಕೆ ನೀಡಿದ್ದಾರೆ. ಬಹಳ ಮೃದುವಾಗಿ, ಗಂಭೀರವಾಗಿ ಉಪ ಮುಖ್ಯ ಮಂತ್ರಿಯಾಗಿ ಸದನಕ್ಕೆ ಪ್ರಪ್ರಥಮವಾಗಿ ಹೇಳಿಕೆ ಕೊಟ್ಟಿರುವುದು ಸಂತೋಷ. ಅವರನ್ನು ಮತ್ತೊಮ್ಮೆ ಇಲ್ಲಿ ಕೇಳಿದಾಗ, ನಮ್ಮೆಲ್ಲರನ್ನೂ ಕರೆದು ಈ ಕರ್ನಾಟಕ ರಾಜ್ಯದ ವಿದ್ಯುಚ್ಛಕ್ತಿ ವ್ಯವಸ್ಥೆಯ ಬಗ್ಗೆ ಏನು ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡುತ್ತೇವೆಂದು ಈ ಸದನದಲ್ಲಿ ಭರವಸೆ ಕೊಟ್ಟಿದ್ದರು. ಅವರು ಅಧ್ಯಕ್ಷರಾಗಿದ್ದಾಗಲೂ ನಮ್ಮ ಜೊತೆಯಲ್ಲಿ ಧ್ವನಿಗೂಡಿಸಿ. ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಸರಿಪಡಿಸಲು ಆ ಭರವಸೆಯನ್ನು ಈಡೇರಿಸಬೇಕೆಂದು ಅವರು ಈ ಸ್ಥಳದಲ್ಲಿ ಕುಳಿತು ಹೇಳಿದ್ದರು. ಇವತ್ತು ಅವರೇ ಮಂತ್ರಿಗಳಾಗಿ ಸಂಬಂಧಪಟ್ಟ ಇಲಾಖೆಯು ಅವರ ಕೈಯಲ್ಲಿರುವಾಗ ಅವರಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿಯದು ಬಹಳ ಕಣ್ಣೀರಿನ ಕಥೆಯಾಗಿದೆ. ಇದನ್ನು ವ್ಯವಸ್ಥಿತವಾಗಿ ಮಾಡತಕ್ಕಂಥ ಒಂದು ಧೈರ್ಯವನ್ನು ತಾವು ತೆಗೆದುಕೊಂಡು, ಇದಕ್ಕೆ ಎಲ್ಲರನ್ನೂ ಕರೆದು ಸಮಗ್ರವಾದಂಥ ಒಂದು ಚಿಂತನೆಯನ್ನು ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇದು ನಿಮ್ಮ ಕೈಯಲ್ಲೂ ಆಗಲಿಲ್ಲವೆಂದರೆ, ವಿಫಲವಾದರೆ ಬಹುಶಃ ಇನ್ನೂ ಯಾರ ಕೈಯಲ್ಲಾದರೂ ಆಗುತ್ತದೆಯೆಂದು ನಾನಂತೂ ಅಂದುಕೊಂಡಿಲ್ಲ. ದಯಮಾಡಿ ತಾವು ಕೂಡಲೆ ವ್ಯವಸ್ಥೆ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಸಭಾಧ್ಯಕ್ಷರೇ, ನಾನು ಈ ಸಂಧರ್ಭದಲ್ಲಿ ಕೇವಲ ನಿನ್ನೆ ದಿವಸ ಇಡೀ ರಾತ್ರಿ ಕತ್ತಲೆ ಇತ್ತು ಎಂದು ತಾವು ಹೇಳಿಕೆ ಕೊಟ್ಟರುವುದರಿಂದ ಏನೂ ಉಪಯೋಗವಾಗುವುದಿಲ್ಲ. ಆದರೆ ಇಡೀ ರಾಜ್ಯದಲ್ಲಿ ದಿನವ ೨೪ ಗಂಟೆಗಳಲ್ಲಿ ಕೇವಲ ೪-೫ ಗಂಟೆಗಳು ವಿದ್ಯುಚ್ಛಕ್ತಿ ಸರಿಯಾಗಿ ಸರಬರಾಜು ಆಗುತ್ತಾ ಇದ್ದರೂ ಅದೂ ಸರಿಯಾದ ರೀತಿ ಸರಬರಾಜು ಆಗುತ್ತಾ ಇಲ್ಲ. ಅದೂ ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ವಿಚಿತ್ರವಾದ ಪರಿಸ್ಥಿತಿ ಇದೆ. ಟ್ರಾನ್ಸ್‌ಮಿಷನ್ ಲಾಸ್ ಡೇ ಬೈ ಡೇ ಜಾಸ್ತಿಯಾಗುತ್ತಾ ಇದೆ. ಅನೇಕ ಅವ್ಯವಹಾರಗಳು ನಡೆಯುತ್ತಿವೆ. ತಾವು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮುಂಚೆ ಗ್ರಾಮೀಣ ಪ್ರದೇಶದ ಜನರಿಗೆ ಇದರ ಬಗ್ಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಒಂದು ಪರ್ಯಾಯ ವ್ಯವಸ್ಥೆ ಮಾಡಿ. ಗ್ರಾಮೀಣ ಪ್ರದೇಶದಲ್ಲಿ ಬಾರಿ ಕಡೆ ವಿದ್ಯುತ್ ಸರಬರಾಜು ಆಗದೆ ರೈತರ ಪಂಪ್‌ಸೆಟ್ ಸ್ಟಾರ್ಟ್ ಆಗದೆ ತೊಂದರೆಯಾಗಿದೆ. ವಿದ್ಯಾರ್ಥಿಗಳಿಗೂ ಕೂಡ ತೊಂದರೆ ಆಗಿದೆ. ದಯಮಾಡಿ ಇದರ ಬಗ್ಗೆ ಸಮಗ್ರವಾಗಿ ಒಂದು ಸ್ಟೇಟ್‌ಮೆಂಟ್‌ನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ನಾವು ಅನೇಕ ಸಲಹೆಗಳನ್ನೂ ಕೊಟ್ಟಿದ್ದೇವೆ. ವೈಯಕ್ತಿಕವಾಗಿ ನನ್ನ ಅಭಿಪ್ರಾಯ ಹೇಳುವುದಾದರೆ ಶಾಸಕರನ್ನು ಕರೆದು ಮಾತನಾಡಿದರೂ ಏನೂ ಪ್ರಯೋಜನವಿಲ್ಲ. ಈ ಸಭೆಯಲ್ಲಿ ಮಾತನಾಡಿ ಸಲಹೆಗಳನ್ನು ಕೊಡುತ್ತೇವೆ. ಆದರೂ ಈ ವಿಚಾರದಲ್ಲಿ ದಿಟ್ಟ

ಮಾರ್ಗವನ್ನು ತಾವು ತೆಗೆದುಕೊಳ್ಳಬೇಕು. ಇದು ಈಗಾಗಲೇ ಆಗಬೇಕಿತ್ತು. ಬಹಳ ವರ್ಷಗಳಿಂದ ಅಂಟಿರತಕ್ಕ ಖಾಯಿಲೆ ಇದು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸನ್ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶಗಳಲ್ಲಿ ಬಹಳಷ್ಟು ವಿದ್ಯುತ್ ಕೊರತೆ ಇದೆ.

ಛೇರ್ಮನ್:- ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ:- ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಕೊರತೆ ಬಹಳ ಇದೆ. ಅದರ ಬಗ್ಗೆ ಅವರು ಚರ್ಚೆ ಮಾಡುವುದರಲ್ಲಿ ತಪ್ಪೇನಿಲ್ಲ.

ಛೇರ್ಮನ್:- ಎಲ್ಲರೂ ಒಂದೇ ವಿಷಯ ಹೇಳುವುದರಲ್ಲಿ ಅರ್ಥವಿಲ್ಲ. ಎಷ್ಟು ಜನ ಮಾತನಾಡಿದರೂ ಒಂದೇ ವಿಷಯ. ಅನಾವಶ್ಯಕವಾಗಿ ಸಮಯವನ್ನು ಏಕೆ ಹಾಳು ಮಾಡಬೇಕು?

ಶ್ರೀ ಬಸವರಾಜ ರಾಯರೆಡ್ಡಿ:- ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯಕ್ಕೆ ಟೈಮ್ ಕೊಡಲೇಬೇಕು. ಅವಶ್ಯಕತೆ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸನ್ಮಾನ್ಯ ಅಧ್ಯಕ್ಷರೇ, ಸಚಿವರು ನಿನ್ನೆ ಆಕಸ್ಮಿಕವಾಗಿ, ಅನಿವಾರ್ಯವಾಗಿ ನಡೆದಂಥ ಘಟನೆಯ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ನೀರಾವರಿ ಮಾಡತಕ್ಕ ರೈತರ ಗೋಳು ಹೇಳತೀರದು. ಏಕೆಂದರೆ ಅಲ್ಲಿ ಕ್ಷಣ ಕ್ಷಣಕ್ಕೂ ವಿದ್ಯುಚ್ಛಕ್ತಿ ಹೋಗುತ್ತಿದೆ. ನಮ್ಮ ಉತ್ಪಾದನೆ ಏನಿದೆ ಅದರಲ್ಲಿ ನಿಶ್ಚಿತವಾದಂಥ ವೇಳೆಯನ್ನು ನಿಗದಿ ಪಡಿಸಿ ವಿದ್ಯುತ್ ಕೊಟ್ಟರೆ ನಮ್ಮ ರೈತರಿಗೆ ಏನಾದರೂ ಅಲ್ಪಸ್ವಲ್ಪ ಬೆಳೆ ಸಿಗಲು ಅನುಕೂಲವಾಗುತ್ತದೆ. ಅದೇರೀತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಬಹಳ ಹತ್ತಿರ ಬಂದಿದೆ. ಓದಲಿಕ್ಕೆ ಬಹಳಷ್ಟು ತೊಂದರೆ ಆಗುತ್ತಿದೆ. ಪರೀಕ್ಷೆಗಳಿಗೆ ಕೂರಲೂ ತೊಂದರೆಯಾಗುತ್ತಿದೆ. ಕುಡಿಯುವ ನೀರಿಗೆ ಸಹಿತ ಇವತ್ತು ವಿದ್ಯುತ್ ಇಲ್ಲ. ಫ್ಲೋರ್ ಮಿಲ್‌ನಲ್ಲಿ ಹಿಟ್ಟು ಬೀಸಲಿಕ್ಕೆ ವಿದ್ಯುತ್ ಇಲ್ಲ ನಿಶ್ಚಿತ ಅವಧಿಯಲ್ಲಾದರೂ ೬ ತಾಸು - ೮ ತಾಸು ವಿದ್ಯುತ್ ಕೊಡಬೇಕು. ಇದುವರಗೆ ಯಾವ ಯಾವ ಭಾಗಕ್ಕೆ ಮಾಡಲಿಕ್ಕೆ ಆಗಲಿಲ್ಲ, ಅಲ್ಲಿ ತಾವು ಮಾಡುತ್ತೀರೆಂಬ ವಿಶ್ವಾಸದಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ ಸಂಬಂಧಪಟ್ಟ ಅಧಿಕಾರಿಗಳು ಉತ್ಪಾದಕರ ಜೊತೆಗೆ ಮಾತನಾಡಿ ನಿಶ್ಚಿತವಾದ ವೇಳೆಯಲ್ಲಿ ವಿದ್ಯುತ್ ಕೊಡುತ್ತೇವೆಂದು ಜನರಿಗೆ ಹೇಳೋಣ. ನಮ್ಮ ಪರಿಸ್ಥಿತಿ, ಉತ್ಪಾದನೇ ಈ ರೀತಿ ಇದೆ, ಈ ವೇಳೆಯಲ್ಲಿ ತೆಗೆದುಕೊಳ್ಳಿ ಉಳಿದ ವೇಳೆಯಲ್ಲಿ ಬೇರೆಯವರಿಗೆ ಕೊಡೋಣ ಸಹಕರಿಸಿ ಎಂದು ಹೇಳಿ, ಇದ್ದ ಸ್ಥಿತಿಯಲ್ಲಿ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

೨. ಡಾ.ಯು.ಆರ್. ಅನಂತಮೂರ್ತಿಯವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡಿರುವ ಕುರಿತು ಶ್ಲಾಘನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷೆಣಿಯವರೇ, ನಾನು ಅಧ್ಯಕ್ಷರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಸಭೆಗೆ ಬರಲಿಕ್ಕೆ ಮುಂಚೆ ಒಂದು ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಹೇಳಿ ಅಧ್ಯಕ್ಷರ ಪರವಾನಿಗಿ ಪಡೆದಿದ್ದೇನೆ. ಆದರೂ ಬಹಳ ಹೆಮ್ಮೆಯಿಂದ ವಿಷಯವನ್ನು ಪ್ರಸ್ತಾಪ ಮಾಡಿ ಎಂದು ಹೇಳಿದ್ದಾರೆ. ಇಡೀ ಕರ್ನಾಟಕದ ನಾಲ್ಕು ಕೋಟಿ ಜನ ಹೆಮ್ಮೆ ಪಡತಕ್ಕಂಥ ವಿಚಾರ. ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಕನ್ನಡ ಪ್ರಖ್ಯಾತ ಬರಹಗಾರರು ಆಗಿರತಕ್ಕಂಥ ಡಾ. ಯು.ಆರ್.